

ಎಡದಿಂದ ಬಲಕ್ಕೆ:

1. ಅಧಿನಿಯಮಗಳನ್ನೆಲ್ಲ ಗಾಢವಾಗಿ ಅಭ್ಯಸಿಸುವ ಕೆಲಸ (4)
3. ವಿಷ ನಿವಾರಣೆಗೆ ಬಂದಿದ್ದಾನಲ್ಲ, ಕೆಟ್ಟ ಚಟ ಹತ್ತಿಸಿಕೊಂಡವನು (3)
4. ರೇವು ನಗರದ ಹತ್ತಿರವೇ ನಕ್ಷತ್ರದ ಹೆಸರು (3)
6. ಲಕ್ಷ ವೇಷ ಭೂಷಣಗಳಲ್ಲಿ ಸೀತೆಯ ಮಕ್ಕಳು (4)
7. ಕಾಲಹರಣದ ಸಂತಸಕ್ಕೆ ಬಂಡೆ ಎಸೆದು ಹಾಳುಮಾಡು (4)
8. ಗಾಬರಿಯಲ್ಲಿ ಬಂದದ್ದಕ್ಕೆ ಹೀಗೆ ಚಪ್ಪಲಿ ಇಲ್ಲದ ಪಾದ (4)
10. ಬಳೆ-ಸರಗಳ ಜೊತೆಗೆ ರುಚಿ ತುಂಬಿದ ಕದಳೀ ಫಲ (4)
12. ಮತ್ತದನ್ನೇ ನೋಡಿ, ಭಾರೀ ಮತ್ಸ್ಯ (4)
14. ಗಾರೆ ಕೆಲಸದವರಿಗೂ ಬೇಕೇ ಕೊಯ್ಯುವ ಸಾಧನ? (4)
16. ಹಂಸವನ್ನಿರಿಸಿರುವುದು ಇಲ್ಲೇ ಹತ್ತಿರ (3)
17. ತಡಬಡಿಸಿದ್ದಕ್ಕೇ ಹೀಗೆ ಏಟು ಹಾಕುವುದೇ? (3)
18. ಮನುಷ್ಯ-ವಿಷ್ಣು ಜೊತೆ ನಿಂತರೂ ದೇವರೇ? (4)

ಮೇಲಿಂದ ಕೆಳಕ್ಕೆ:

1. ಅನ್ಯಾಯವೇನಿಲ್ಲ ಗಟ್ಟಿಯದೂ ಅಲ್ಲ, ನೀರಿನಂತೆಯೂ ಅಲ್ಲದ್ದು (3)
2. ನಶ್ವರ ಮನುಷ್ಯರೆಲ್ಲರ ಒಡೆಯ (3)
3. ಆಹಾರ ಹಂಚುವ ವ್ಯವಸ್ಥೆಯ ಕಾರ್ಯಭಾರ ಆತನದು (3)
5. ಜ್ಯೋತಿ ಖರೀದಿಸಿದ್ದು ಕಬ್ಬಿಣದ ಭಾರೀ ಭದ್ರ ಪೆಟ್ಟಿಗೆ (3)
7. ಕಾವಲಿನ ಜನರ ಬಗೆಗೇ ಕನಸು (4)
9. ಸಾಕಲ್ಲ, ಅವನು ಮಾಡಿದ್ದು ಬರೀ ನಷ್ಟ (4)
11. ಬಣ್ಣ ಹಚ್ಚಿಸುತ್ತ ನಿಂತಿದ್ದಾನಲ್ಲ, ಆತ ಅಡಿಗೆಯವ (3)
13. ಸಾವಿತ್ರಿಯ ಗಂಡ, ಸುಳ್ಳನ್ನು ಕಿಂಚಿತ್ತೂ ಹೊಂದಿಲ್ಲ (4)
14. ಹೊಗೆಯನ್ನು ಎಬ್ಬಿಸಿದ್ದರ ಉದ್ದೇಶ ಅರ್ಥವಾಗುತ್ತಿಲ್ಲ (3)
15. ಸಭ್ಯರಿಗೆಲ್ಲ ಪರಿಚಿತಳೇ ಹೌದು, ರಾಮಭಕ್ತೆ (3)

### ಪದಬಂಧ 19.1.2012 ಉತ್ತರಗಳು

ಎಡದಿಂದ ಬಲಕ್ಕೆ:

1. ಪ್ರತಿಕೂಲ; 3. ಭಾರತಿ; 7. ಸೆಕೆಗಾಲ; 8. ವರದಾ; 9. ಕದ; 12. ರಜಾ; 14. ವಿದಾಯ; 15. ಗೃಹಕೃತ್ಯ; 17. ಮನ್ನಣೆ; 18. ಗಣಪತಿ.

ಮೇಲಿಂದ ಕೆಳಕ್ಕೆ:

1. ಪ್ರತಿ; 2. ಕೂಡಿಕೆ; 4. ರಸದಾಳಿ; 5. ಬಾಲಕ; 6. ಅವಸರ; 10. ದಣಾಯಕ; 13. ಜಾಗೃತಿ; 11. ಅವಿಚ್ಛಿನ್ನ; 16. ಕೃಪಣ; 17. ಮತಿ.

---

# ವ್ಯೋಮ ವಿಸ್ಮಯ

## ಆ್ಯಂಡ್ರೊಮೇಡಾ-ಅದೇನು?

ಆ್ಯಂಡ್ರೊಮೇಡಾ – ಅದು ರಾಜಕುವರಿಯೊಬ್ಬಳ ಹೆಸರು. ಅರಸ 'ಸಿಫಿಯಸ್' ಮತ್ತು ರಾಣಿ 'ಕ್ಯಾಸಿಯೋಪಿಯಾ' ಇವರ ಮಗಳು ಆಕೆ. ಕಡಲ ಪೆಡಂಭೂತವೊಂದಕ್ಕೆ ಬಲಿ ಸಮರ್ಪಣೆ ಆಗಲಿದ್ದ; ಅದಕ್ಕಾಗಿ ಬಂಧಿಯಾಗಿದ್ದ ಈ ರಾಜಕುಮಾರಿಯನ್ನು ವೀರ 'ಪರ್ಸಿಯಸ್' ಕಾಪಾಡಿ ವಿವಾಹವಾದ. ಇದು ಗ್ರೀಕರ ಪುರಾಣಗಳಲ್ಲಿನ ಒಂದು ಕತೆ.

ಬಂಡೆಯೊಂದಕ್ಕೆ ಸರಪಳಿಯಿಂದ ಕಟ್ಟಿ ಹಾಕಲಾಗಿದ್ದ ಆ್ಯಂಡ್ರೊಮೇಡಾಳ ದೃಶ್ಯಕ್ಕೇ ಹೊಂದಿಸಿರುವ ನಕ್ಷತ್ರ ಪುಂಜವೊಂದು ಉತ್ತರ ಗೋಳಾರ್ಧದ ಆಕಾಶದಲ್ಲಿದೆ. 'ಆ್ಯಂಡ್ರೊಮೇಡಾ ನಕ್ಷತ್ರಪುಂಜ' ಎಂದೇ ಹೆಸರಿಸಲಾಗಿರುವ ಈ ಸುಪ್ರಸಿದ್ಧ ನಕ್ಷತ್ರಪುಂಜ ಬರಿಗಣ್ಣಿಗೆ ಸುಲಭ ಗೋಚರವಲ್ಲ.

ಆದರೆ ಆ್ಯಂಡ್ರೊಮೇಡಾ ನಕ್ಷತ್ರಪುಂಜದ ಪ್ರದೇಶದಲ್ಲಿರುವ ಗ್ಯಾಲಕ್ಸಿಯೊಂದರಿಂದ ಈ ಹೆಸರು ತುಂಬ ವಿಖ್ಯಾತ. ಆ್ಯಂಡ್ರೊಮೇಡಾ ಗ್ಯಾಲಕ್ಸಿ ಎಂದೇ ಆ ಗ್ಯಾಲಕ್ಸಿಯ ಹೆಸರು ಕೂಡ.

ಆ್ಯಂಡ್ರೊಮೇಡಾ ಗ್ಯಾಲಕ್ಸಿಯ ವೈಶಿಷ್ಟ್ಯಗಳು-ವಿಸ್ಮಯಗಳು ಹಲವಾರು. ಈ ಗ್ಯಾಲಕ್ಸಿ ನಮ್ಮಿಂದ ಇಪ್ಪತ್ತೆರಡು ಲಕ್ಷ ಜ್ಯೋತಿರ್ವರ್ಷ ದೂರದಲ್ಲಿದೆ. ಹಾಗಿದ್ದೂ ಚಂದ್ರನಿಲ್ಲದ ಮೋಡರಹಿತ ಆಗಸದಲ್ಲಿ ಈ ಗ್ಯಾಲಕ್ಸಿ ಭೂಮಿಯಿಂದ ಬರಿಗಣ್ಣಿಗೇ ಗೋಚರಿಸುತ್ತದೆ. ನಮ್ಮದೇ ಗ್ಯಾಲಕ್ಸಿಯಾದ ಕ್ಷೀರಪಥವನ್ನು ಬಿಟ್ಟರೆ ಬರಿಗಣ್ಣಿಗೆ ಗೋಚರಿಸುವ ಗ್ಯಾಲಕ್ಸಿ ವಿಶ್ವದಲ್ಲಿರುವುದು ಇದೊಂದೇ. ಅಷ್ಟೇ ಅಲ್ಲ, ನೇರವಾಗಿ ನೋಡಸಿಗುವ ಅತ್ಯಂತ ದೂರದ ಅಂತರಿಕ್ಷ ಕಾಯವೂ ಇದೇ.



ಆ್ಯಂಡ್ರೊಮೇಡಾ ಗ್ಯಾಲಕ್ಸಿ 'ಸುರುಳಿ ಗ್ಯಾಲಕ್ಸಿ.' ಅದರದು ನಮ್ಮ ಕ್ಷೀರಪಥಕ್ಕಿಂಥ ದೊಡ್ಡ ಗ್ಯಾಲಕ್ಸಿ. ಈ ಗ್ಯಾಲಕ್ಸಿಯಲ್ಲಿ ಕ್ಷೀರಪಥದ ನಾಲ್ಕು ಪಟ್ಟು ಆಗುವಷ್ಟು ಎಂದರೆ ಸುಮಾರು ನಲವತ್ತು ಸಾವಿರ ಕೋಟಿಯಷ್ಟು ನಕ್ಷತ್ರಗಳಿವೆ. ಅದಕ್ಕೆ ಎರಡು ಕುಬ್ಜ ಉಪ ಗ್ಯಾಲಕ್ಸಿಗಳೂ ಇವೆ.

ವಿಪರ್ಯಾಸ ಏನೆಂದರೆ ಆ್ಯಂಡ್ರೊಮೇಡಾ ಗ್ಯಾಲಕ್ಸಿ ನಮ್ಮ ಕ್ಷೀರಪಥದತ್ತ ಧಾವಿಸಿ ಬರುತ್ತಿದೆ. ಹಾಗಾಗಿ ಮುಂದೆ ಒಂದು ಕಾಲದಲ್ಲಿ ಈ ಗ್ಯಾಲಕ್ಸಿ ನಮ್ಮ ಕ್ಷೀರಪಥಕ್ಕೆ ಡಿಕ್ಕಿ ಹಾಕಲಿದೆ. ಮಹಾ ಪ್ರಳಯ ಸದೃಶ ಆ ಘರ್ಷಣೆಯಲ್ಲಿ ಎರಡೂ ಗ್ಯಾಲಕ್ಸಿಗಳು ಭಾರೀ ತಳಮಳಕ್ಕೊಳಗಾಗಿ ಕಡೆಗೆ ಸಂಪೂರ್ಣ ಬೆರೆತು ಹೋಗುತ್ತವೆ. ಆದರೇನು? ಅದೆಲ್ಲ ಸಂಭವಿಸಲಿರುವುದು ಮುಂದಿನ ಏಳು ಶತಕೋಟಿ ವರ್ಷಗಳ ನಂತರ ಅಷ್ಟೆ!

■ ಎನ್. ವಾಸುದೇವ್